1992-93, 1993-94 ಹಾಗೂ 1994-95ನೇ ಸಾಲುಗಳ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವಾರ್ಷಿಕ ಆಡಳಿತ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನ : ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಉದ್ಯಮಗಳ ಸಮಿತಿಯ 66ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ವಿಷಯ

(1) ಗುಲ್ಬರ್ಗಾ ವಿಶ್ವ ವಿದ್ಯಾನಿಲಯಕ್ಕೆ ಬಸವೇಶ್ವರರ ಹೆಸರನ್ನು ಇಡುವ ಬಗ್ಗೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಈ ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರನ್ನು ಇಡಬೇಕೆನ್ನುವ ಮಾತು ಎಲ್ಲಾ ಕಡೆಯೂ ಕೇಳಿಬರುತ್ತಾ ಇದೆ. ನನಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ದುಃಖ ತರುವಂಥ ಸಂಗತಿಯೆನೆಂದರೆ, ಆ ವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರನ್ನು ಇಡಬೇಕೆನ್ನುವುದಕ್ಕಿಂತ ಹೆಚ್ಚು ನೋವನ್ನು ತರುತ್ತಿರುವಂಥ ಸಂಗತಿ, ಅವರ ಹೆಸರನ್ನು ಇಡಬೇಕೆದು 60-70 ಜನ ಶಾಸಕರು ಮುಖ್ಯಮಂತ್ರಿಗಳಿಗೆ ಮನವಿಯನ್ನು ಕೊಟ್ಟಮೇಲೆ ಅನೇಕ ಜಾತಿಬೇಧ ಸಂಘಸಂಸ್ಥೆಗಳು ಸರ್ಕಾರಕ್ಕೆ ವಿನಂತಿಯನ್ನು ಮಾಡಿದಮೇಲೆ, ಈ ಒಂದು ಹೆಸರನ್ನು ಇಡಬೇಕೆಂದು ರಾಜ್ಯದಲ್ಲಿ ಹೋರಾಟ ಮಾಡುವಂಥ ಪರಿಸ್ಥಿತಿ ಇಮೊತ್ತು ರಾಜ್ಯದಲ್ಲಿ ನಡೆಯುತ್ತಾ ಇದೆ ಎಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ ಜೊತೆಗೆ ಇವೊತ್ತು ನಾನು ಬಂದತಕ್ಷಣ ಈ ಮಾತನ್ನು ಕೇಳಿದೆ. ನಾನು ತಮ್ಮಲ್ಲಿ ವಿನಂತಿ ಮಾಡುವಂಥದ್ದು, ಶಾಸಕರು ಈಗಾಗಲೇ ಮನವಿಯನ್ನು ಕೊಟ್ಟಿದ್ದಾರೆ. ಒಬ್ಬ ಕಾಯಕ ಪುರುಷ ಬಸವಣ್ಣನವರಂಥ ವ್ಯಕ್ತಿ ಬಗ್ಗೆ ಆ ವಿಶ್ವವಿದ್ಯಾನಿಲಯಕ್ಕೆ ಹೆಸರನ್ನು ಇಡಬೇಕು ಎಂದು ಕೇಳಿದಾಗ ಒಂದು ಕ್ಷಣ ತಡಮಾಡದೆ ತಾವು ಒಪ್ಪಿಕೊಳ್ಳಬೇಕಾಗಿತ್ತು ಎಂಬುದು ನನ್ನ ಭಾವನೆ. ನಾನು ಈಗ ತಮ್ಮಲ್ಲಿ ವಿನಂತಿ ಮಾಡುತ್ತಿರುವಂಥದ್ದು, ಈಗಾಗಲೇ ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಬೀದರನಲ್ಲಿ ಈ ಒಂದು ಬೇಡಿಕೆಯನ್ನು ಈಡೇರಿಸಬೇಕೆಂದು ಒತ್ತಾಯ ಮಾಡಿ 16.0296ರಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿರುವುದನ್ನು ನಾನು ಕೇಳಿದ್ದೇನೆ. ನಾನು ಉಪಮುಖ್ಯಮಂತ್ರಿಗಳಾದಂಥ ಸನ್ಮಾನ್ಯ ಜೆ.ಹೆಚ್. ಪಟೇಲರಲ್ಲಿ ವಿನಂತಿ ಮಾಡುತ್ತೇನೆ. ಬಸವ, ಬುದ್ಧ, ಅಂಬೇಡ್ಕರ್, ಇವರೆಲ್ಲಾ ಮಾನವ ಜನಾಂಗಕ್ಕೆ ಸೇರಿದ ವಿಭೂತಿ ಪುರುಷರು. ಇಂತಹವರ ಹೆಸರನ್ನು ಇಡುವ ಪ್ರಶ್ನೆ ಬಂದಾಗ, ಅವರ ಮನಸ್ಸಿನ ಭಾವನೆಯನ್ನು ಅರ್ಥಮಾಡಿಕೊಂಡಾಗ ಒಂದು ರೀತಿ ಗುಲ್ಬರ್ಗಾ ಬಸವಣ್ಣನವರ ಕಾಯಕ ಕ್ಷೇತ್ರ. ಅಲ್ಲಿ ಈ ಪ್ರಶ್ನೆ ಬಂದಾಗ ದಯಮಾಡಿ ಯಾವ ಕಾರಣಕ್ಕೂ ಸಹ ಇಲ್ಲಿ ಕುಳಿತಂಥಹವರು ರಾಜಕಾರಣ ಕೆಲಸಕ್ಕೆ ನಾವು ಸಿದ್ಧರಿಲ್ಲ. ಬಹುಶಃ ಇಲ್ಲಿರುವಂಥ, ಆ ಮನೆಯಲ್ಲಿ ನರಸಿಂಹಮೂರ್ತಿಯವರಂಥ ಹಿರಿಯರು ಅನೇಕ ದಲಿತ ಸಂಘಟನಾ ಸಮಿತಿಯ ಮುಖಂಡರು, ಎಲ್ಲರೂ ಸಹ ಒಕ್ಕೊರಲಿನಿಂದ ಅಲ್ಲಿಗೆ ಬಸವೇಶ್ವರ ವಿಶ್ವವಿದ್ಯಾನಿಲಯ